**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 14.07.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಇ ಎಂ ವಕೀಲರಿಂದ**

**1.** ನಾನು ನೆಲ್ಲಿಹೊದಿಕೇರಿ ಗ್ರಾಮದಲ್ಲಿ ಕಳೆದ 23 ವರುಷಗಳಿಂದ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. 1 ಮತ್ತು 2 ನೆ ಪ್ರತಿವಾದಿ ಯವರು ನನ್ನ ಅತ್ತೆ ಮತ್ತು ಮಾವ ಆಗಬೇಕು. 1 ಮತ್ತು 2 ನೆ ಪ್ರತಿವಾದಿಯ 3 ನೆ ನಾನು ಮಗಳನ್ನು ಮದುವೆಯಾಗಿರುತ್ತೇನೆ ಎಂದರೆ ಸರಿ . ನನ್ನ ಮತ್ತು 1 ಮತ್ತು 2 ನೆ ಪ್ರತಿವಾದಿಯ ಮಗಳ ಜೂತೆ 2005 ರಲ್ಲಿ ನೆಲ್ಲಿಹೊದಿಕೇರಿ ಗ್ರಾಮದ ದೇವಸ್ಥಾನದಲ್ಲಿ ಮದುವೆಯಾಗಿರುತ್ತದೆ. ಮದುವೆ ಆಗುವ ಮುಂಚೆ ನಾನು ವಿರಾಜಪೇಟೆ ತಾಲೂಕಿನ ಗೋಣಿಕೊಪ್ಪ ಗ್ರಾಮದಲ್ಲಿ ವಾಸವಿರುತ್ತೇನೆ. ವಾದಿಯ ಪರಿಚಯ ಇರುತ್ತದೆ.

2. ವಾದಿಯವರು ನಮ್ಮ ಮನೆಯ ಕೆಳಭಾಗದಲ್ಲಿ ವಾಸವಿರುತ್ತಾರೆ. ಬರಡಿ 40 ಎಕರೆ ನೆಲ್ಲಿ ಹೊದಿಕೇರಿ ಗ್ರಾಮ ದಲ್ಲಿ ವಾದಿಯು ವಾಸ ಮಾಡುತ್ತಿದ್ದಾರೆ ಎಂದರೆ ಸರಿ . ವಾದಿಯು ಯಾವ ವಿಚಾರಕ್ಕೆ 1 ಮತ್ತು 2 ನೆ ಪ್ರತಿವಾದಿಗಳು ದಾವೆಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿದೆ . ವಾದಿಯವರ ತಂದೆಯು ನನಗೆ ಗೊತ್ತಿದ್ದಾರೆ . ವಾದಿಯವರ ತಂದೆಯು ದಿಃ 22.02.1990 ರಂದು ದಾವಾ ಎ ಶೆಡ್ಯೂಲ್ ಸ್ವತ್ತಾದ ಅರ್ಧ ಎಕರೆ ಜಾಗವನ್ನು ಖರೀದಿ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂದಿಪಟ್ಟಂತೆ ನಾನು ಈ ಪ್ರಕರಣದಲ್ಲಿ ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ವಾದಿಯವರ ತಾಯಿ ನನಗೆ ಗೊತ್ತಿಲ್ಲ. ವಾದಿಯವರ ತಾಯಿ ದಿಃ 27.10.1991 ರಂದು ದಾವಾ

ಶೆಡ್ಯೂಲ್ ಬಿ ಆಸ್ತಿ ಯನ್ನು 1 ನೆ ಪ್ರತಿವಾದಿಯವರಿಂದ 38 ಸೆಂಟ್ ಜಾಗವನ್ನು ಶುದ್ಧ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ .

3. ವಾದಿಯವರ ತಾಯಿಯವರು ದಿಃ 11.09.1994 ರಂದು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ದಿಃ 23.10.2003 ರಂದು ದಾವಾ ಸಿ ಶೆಡ್ಯೂಲ್ ಆಸ್ತಿಯನ್ನು 1 ನೆ ಪ್ರತಿವಾದಿಯರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿ ಒಟ್ಟು ಸೇರಿ ಸರ್ವೆ ನಂ 105/72 ಆರ್ ಟಿ ಸಿ ಓಡುತ್ತಿರುತ್ತದೆ ಎಂದರೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿ ಗೆ ಸಂಬಂದಿಸಿದಂತೆ ನಾನು ಯಾವುದೆ ದಾಖಲಾತಿಗಳನ್ನು ನೋಡಿರುತ್ತೇನೆ. ಸಾಕ್ಷಿಗೆ ನಿಪಿ 10 ನ್ನು ತೋರಿಸಲಾಗಿ ಸಾಕ್ಷಿಯು ಸದರಿ ಆರ್ ಟಿ ಸಿ ವಾದಿಯವರ ಹೆಸರಿನಲ್ಲಿರುವ ಆರ್ ಟಿ ಸಿ ಎಂದು ಗುರುತಿಸಿದರು. 2003 ರಲ್ಲಿ ನಿಪಿ 9 ರಂತೆ ದಾವಾ ಸಿ ಶೆಡ್ಯೂಲ್ ಆಸ್ತಿಯು ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ . ದಾವಾ ಎ ರಿಂದ ಸಿ ಶೆಡ್ಯೂಲ್ ಆಸ್ತಿ ಗಳಲ್ಲಿ ವಾದಿ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ .

4. ದಾವಾ ಎ ರಿಂದ ಸಿ ಶೆಡ್ಯೂಲ್ ಆಸ್ತಿಯ ಅದರ ಮೂಲ ಸರ್ವೆ ನಂ 105/19 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂ 105/19 ರ ಆಸ್ತಿಯು ಒಂದು ಎಕರೆ ವಿಸ್ತೀರ್ಣ ಇರುವಂತ ಆಸ್ತಿ ಎಂದರೆ ಸರಿ . ಸದರಿ ಒಂದು ಎಕರೆ ಪೈಕಿ ನಮ್ಮ ಮಾವನರವರು ಮಾರಟ ಮಾಡಿ ಉಳಿದ ಎರಡು ಸೆಂಟ್ ಜಾಗ ನಿಪಿ 8 ರಂತೆ ಆರ್ ಟಿ ಸಿ ಕಾಣಿಸುತ್ತಿರುತ್ತದೆ ಎಂದರೆ

ಸರಿ . ದಾವಾಸ್ವತ್ತುಗಳಲ್ಲಿ ನಮಗೆ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿ . ದಿಃ 20.10.2019 ರಂದು ಅಕ್ರಮವಾಗಿ ಅವರ ತೋಟಕ್ಕೆ ಪ್ರವೇಶ ಮಾಡಿ ಅವರ ತೋಟದಲ್ಲಿದ್ದ ಸಿಲ್ವರ್ ಮರವನ್ನು ಕಡೆದಿದ್ದೆನೆ ಎಂದರೆ ಸರಿಯಲ್ಲ. ನಿಪಿ 14 ರಿಂದ 18 ರಲ್ಲಿ ಕಂಡು ಬರುವಂತಹ ಕಾಫಿಸಿ ತೋಟ ನಮಗೆ ಸಂಬಂದಪಟ್ಟಾದ್ದಾಗಿರುತ್ತದೆ . ನಿಪಿ 14 ರಿಂದ 18 ಕ್ಕೆ ಸಂಬದಪಟ್ಟಂತೆ ಫೋಟೋಗಳಲ್ಲಿ ಕಾಣುತ್ತಿರುವ ಕಾಫಿ ತೋಟ ನಮಗೆ ಸಂಬದಪಟ್ಟಿದ್ದು ಎಂದು ತೋರಿಸಲು ಯಾವುದೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಸದರಿ ತೋಟ ನನಗೆ ಸಂಬದಪಟ್ಟಿದ್ದು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿಸಲು ಯಾವುದೆ ತೊಂದರೆ ಇರುವುದಿಲ್ಲ. ಈ ವಿಚಾರಕ್ಕೆ ಸಂಬಂದಪಟ್ಟಂತೆ ವಾದಿಗಳು ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿದ್ದು ಅಲ್ಲಿ ನಾನು ವಾದಿಗಳಿಗೆ ಬರೆ 10 ಸೆಂಟ್ ಜಾಗ ಮಾರಟ ಮಾಡಿದ್ದು ಉಳಿದ 90 ಸೆಂಟ್ ಜಾಗ ನಮ್ಮದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ನಾವು ವಾದಿಗಳಿಗೆ ಉದ್ದೇಶ ಪೂರಕವಾಗಿ ತೊಂದರೆ ಕೊಡುವ ಉದ್ದೇಶದಿಂದ ನಿಪಿ 14 ರಿಂದ 18 ರಲ್ಲಿ ಕಾಣುವ ತೋಟ ನಮ್ಮದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿಯವರು ಉಳಿಸಿಕೊಂಡ 2 ಸೆಂಟ್ ಜಾಗದಲ್ಲಿ ಮನೆ ಕಟ್ಟಿದ್ದು ಅಲ್ಲಿ ನಾನು ವಾಸವಿರುತ್ತೇನೆ ಎಂದರೆ ಸರಿಯಲ್ಲ. ಸಕ್ಷಿಯು ಮುಂದುವರೆದು ನಾನು ಸದರಿ 2 ಸೆಂಟ್ ನ ಪಕ್ಕದಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ ಎಂದು ನುಡಿದರು. ನಾನು ಮನೆ ಕಟ್ಟಿಕೊಂಡಿರುವ ಜಾಗ ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಯ

ಡೋರ್ ನಂ 145/1 ಆಗಿದ್ದು ಅದು ಸರ್ವೆ ನಂ 105/1 ರಲ್ಲಿ ಇರುತ್ತದೆ. ಸದರಿ ವಿಚಾರವನ್ನು ನನ್ನ ಪ್ರತಿವಾದಿ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಈ ವಿಚಾರ ತಿಳಿಸಬೇಕು ಎಂದು ಗೊತ್ತಿರಲಿಲ್ಲ ಎಂದು ನುಡಿದರು. 1 ನೆ ಪ್ರತಿವಾದಿಯು ಕಟ್ಟಿರುವಂತ ಮನೆಯಲ್ಲಿ ಯಾರು ವಾಸವಿರುವುದಿಲ್ಲ ಅದು ಅರ್ಧ ಬಿದ್ದು ಹೋಗಿರುತ್ತದೆ.

6. ನಿಪಿ 8 ರ ಲ್ಲಿ ಕಟ್ಟಿರುವ ಮನೆ ಬಿದ್ದು ಹೋಗಿದ್ದು ಅದರ ಪಕ್ಕದಲ್ಲಿ ಕಟ್ಟಿರುವ ಮನೆಯಲ್ಲಿ ವಾಸವಿದ್ದೇನೆ ಎಂದು ತೋರಿಸಲು ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರಿಗೆ ತೊಂದರೆ ಮಾಡುವ ಉದ್ದೇಶದಿಂದ ಪ್ರತ್ಯೇಕವಾಗಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ನಾನು ಮತ್ತು ನನ್ನ ಹೆಂಡತಿ ವಾಸವಿರುವ ಬಗ್ಗೆ ನೀಡಿರುವ ವಾಸದ ದೃಡೀಕರಣ ಪತ್ರವಾಗಿರುತ್ತದೆ. ನಿಡಿ 2 ನನ್ನ ಅತ್ತಿಗೆ ವಾಸ ಮಾಡುತ್ತಿರುವ ಜಾಗದ ದೃಡೀಕರಣ ಪತ್ರವಾಗಿರುತ್ತದೆ . ನಿಡಿ 3 ನ್ನು ನಾನು ನೆಲ್ಲಿಹೊದಿಕೇರಿ ಗ್ರಾಮದಲ್ಲಿ ವಾಸವಿದ್ದೇನೆ ಎಂದು ತೋರಿಸಲು ಗ್ರಾಮ ಪಂಚಾಯಿತಿಯವರು ನೀಡಿರುತ್ತಾರೆ. ನಿಡಿ 4 ರಿಂದ 8 1 ಪ್ರತಿವಾದಿಯವರ ಹೆಸರಿನಲ್ಲಿ ಇರುತ್ತದೆ.

7. ನಿಡಿ 11 ನ್ನು 1 ನೆ ಪ್ರತಿವಾದಿಯವರು ಕೊಟ್ಟಿರುವಂತ ದಾಖಲಾತಿಯಾಗಿದ್ದು ಅದನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ನಿಡಿ 11 ನ್ನು ಇದೆ ಮೊದಲನೆ ಬಾರಿಗೆ

ನೋಡಿರುತ್ತಿರುತ್ತೇನೆ. ನಿಡಿ 12 ಯಾಕೆ 1 ಪ್ರತಿವಾದಿಯವರು ಪಂಚಾಯಿತಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ 1 ರಿಂದ 12 ರ ದಾಖಲಾತಿಗಳು ಯಾವುದೆ ರೀತಿಯಲ್ಲಿ ನಾನು ತೆಗೆದುಕೊಂಡಿರುವ ತಕರಾರಿಗೆ ಹೊಂದಿಕೊಂಡಂತೆ ದಾಖಲಾತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 26.10.2019 ರಂದು ಬೆಳಗ್ಗೆ 9.30 ಗಂಟೆಗೆ ಪುನಹಃ ದಾವಾಸ್ವತ್ತುಗಳಿಗೆ ಅಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇನೆ ಎಂರದೆ ಸರಿಯಲ್ಲ.

8. ನಮ್ಮ ಮಾವನರವರು ಜೀವಿತಾ ಕಾಲದಲ್ಲಿ ದಾವಾಸ್ವತ್ತನ್ನು ಮಾರಾಟ ಮಾಡಿದ್ದರು ಅದನ್ನು ಅಕ್ರಮವಾಗಿ ಕಬಳಿಸುವ ಉದ್ದೇಶದಿಂದ ವಾದಿಯವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.1 ನೆ ಪ್ರತಿವಾದಿಯವರು ಮಾರಾಟ ಮಾಡಿದಂತಹ ಸ್ವತ್ತುಗಳಲ್ಲಿ ನಮಗಾಗಲಿ ಅಥವಾ ನನ್ನ ಹೆಂಡತಿಯಾಗಲಿ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿ . ನಾನು ವಾದಿಯವರ ಜಾಗವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಹಾಕಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

ಪ್ರ ದ ನ್ಯಾದಂ, ಕುಶಾಲನಗರ